
# ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು

# ಗೌರವ ಪ್ರಶಸ್ತಿ–೨೦೧೮

## ಪ್ರಶಸ್ತಿ ಪುರಸ್ಕೃತರ ಪರಿಚಯ



ಪ್ರೊ. ಕೆ.ಜಿ. ನಾಗರಾಜಪ್ಪ



ಶ್ರೀ ಬಾಬು ಕೃಷ್ಣಮೂರ್ತಿ



ಶ್ರೀಮತಿ ಉಷಾ ಪಿ. ರೈ.



ಡಾ. ವೀರಣ್ಣ ರಾಜೂರ



ಪ್ರೊ. ಲಕ್ಷ್ಮಣ ತೆಲಗಾವಿ



ಮರುಚಿಂತನೆಯ ಹರಿಕಾರರೆಂದೇ ಪ್ರಸಿದ್ಧರಾಗಿರುವ ನಾಡೋಜ ಪ್ರೊ. ಕೆ.ಜಿ. ನಾಗರಾಜಪ್ಪ ಅವರ ಅವಿಸ್ಮರಣೀಯವಾದ ಸಾಹಿತ್ಯ ಸೇವೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ೨೦೧೯ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಲು ಹರ್ಷಿಸುತ್ತದೆ.

## ಪ್ರೊ. ಕೆ.ಜಿ. ನಾಗರಾಜಪ್ಪ

ಕನ್ನಡದ ಸುಪ್ರಸಿದ್ಧ ಕನ್ನಡದ ವಿಮರ್ಶಕರು, ಕಥೆ – ಲಲಿತ ಪ್ರಬಂಧಕಾರರೆಂದು ಖ್ಯಾತರಾಗಿರುವ ಪ್ರೊ. ಕೆ.ಜಿ. ನಾಗರಾಜಪ್ಪನವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕಲ್ಲೂರು ಎಂಬಲ್ಲಿ ೯ ಜನವರಿ ೧೯೩೪ರಂದು ಜನಿಸಿದರು. ಮೈಸೂರು ವಿ.ವಿ.ಯಿಂದ ಎಂ.ಎ. ಪದವಿ ಪಡೆದು ತುಮಕೂರಿನಲ್ಲಿ ಅಧ್ಯಾಪನ ವೃತ್ತಿ ನಿರ್ವಹಿಸಿ, ಬೆಂಗಳೂರು ವಿ.ವಿ. ಯಲ್ಲಿ ಅತಿಥಿ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು.

ವೈದಿಕ– ಅವೈದಿಕ ಸಂಪ್ರದಾಯಗಳನ್ನು ವಿಮರ್ಶಾತ್ಮಕವಾಗಿ ಅನುಶ್ರೇಣಿ ಯಜಮಾನಿಕೆ ಎಂಬ ಲೇಖನಗಳ ಸಂಗ್ರಹದ ಕೃತಿಯಲ್ಲಿ ಪರಿಶೀಲನೆ ಮಾಡಿರುವ ಪ್ರೊ. ಕೆ.ಜಿ. ನಾಗರಾಜಪ್ಪ ಜ್ಞಾನದ ಹೊಸನೆಲೆಗಳ ಶೋಧದಲ್ಲಿ ಶ್ರಮಿಸಿದ ಹಿರಿಯರು. ಇವರ 'ಅನುಶ್ರೇಣಿ–ಯಜಮಾನಿಕೆ' ಕನ್ನಡದ ಬಹುಮುಖ್ಯ ಚಿಂತನೆಯನ್ನು ಪ್ರತಿಪಾದಿಸುತ್ತಿವೆಯೆಂದು ಹೇಳಲಾಗಿದೆ. ಕಾದಂಬರಿ, ವಿಮರ್ಶೆ, ಸಂಶೋಧನೆ, ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗೈದಿರುವ ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಶಿವಕುಮಾರ ಶ್ರೀ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದ ಗೌರವಗಳು ಸಂದಿವೆ. ಹಲವು ಸಂಘ ಸಂಸ್ಥೆಗಳ ಸನ್ಮಾನ ಗೌರವಗಳಿಗೂ ಭಾಜನರಾಗಿದ್ದಾರೆ.


## ಪ್ರೊ. ಕೆ.ಜಿ. ನಾಗರಾಜಪ್ಪ ಅವರ ಕೃತಿಗಳು

ದೊಡ್ಡ ಸಂಕಣ್ಣ ನಾಯಕ (ಕಾದಂಬರಿ)
ಮರುಚಿಂತನೆ (ವಿಮರ್ಶೆ)
ದೇವಾಂಗ ಸಂಸ್ಕೃತಿ ಒಂದು ಅಧ್ಯಯನ (ಸಂಶೋಧನೆ)
ಭಕ್ತಿ ಸಾಹಿತ್ಯದಲ್ಲಿ ಪ್ರತಿಭಟನೆಯ ವಿಧಾನಗಳು
ಇಕ್ಕಟ್ಟು ಬಿಕ್ಕಟ್ಟು (ವಿಮರ್ಶೆ)
ಅನುಶ್ರೇಣಿ–ಯಜಮಾನಿಕೆ (ವಿಮರ್ಶೆ)

## ಸಂಪಾದನೆ

ಶಿವಕುಮಾರವಾಣಿ
ಮಧ್ಯಕಾಲೀನ ಕನ್ನಡ ಕವಿತೆ
ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು
ಶ್ರೀ ಜ.ಚ.ನಿ. ಸಾಹಿತ್ಯ ಸಮ್ಮಿಶ್ರ
ದೇವರ ದಾಸಿಮಯ್ಯನ ವಚನ ಸಂಗ್ರಹ

**ಪ್ರೊ. ಕೆ.ಜಿ. ನಾಗರಾಜಪ್ಪ**
ನಂ.೨೩, ಅಪೂರ್ವ, ೫ನೇ ಮುಖ್ಯರಸ್ತೆ, ಮಾರುತಿ ಹೆಚ್.ಬಿ.ಸಿ.ಎಸ್.
ಲೇಔಟ್, ಗುರಪ್ಪನಪಾಳ್ಯ, ಬಿ.ಟಿ.ಎಂ. ೧ ನೇ ಹಂತ, ಬೆಂಗಳೂರು–೫೬೦೦೨೯.
ದೂ : ೯೨೪೧೧೦೮೦೮೪



**ಸಾಹಿತ್ಯ ಮತ್ತು ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗಣನೀಯ ಸಾಧನೆಗೈದಿರುವ ಡಾ. ಬಾಬು ಕೃಷ್ಣಮೂರ್ತಿಯವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ೨೦೧೯ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಲು ಹರ್ಷಿಸುತ್ತದೆ.**

## ಡಾ. ಬಾಬು ಕೃಷ್ಣಮೂರ್ತಿ

೧೯೭೪ರಲ್ಲಿ ತಮ್ಮ 'ಅಜೇಯ'ದಿಂದ ಪ್ರಸಿದ್ಧಿಗೆ ಬಂದ ಡಾ. ಬಾಬು ಕೃಷ್ಣಮೂರ್ತಿಯವರು ಮೊದಲಿಗೆ ಮಕ್ಕಳ ಸಾಹಿತ್ಯದಲ್ಲಿ ಗುರುತಿಸಿಕೊಂಡರು. 'ಮಿಟ್ಟಿ ತಾತ ಕಥೆ ಹೇಳ್ತಾರೆ' ಎಂಬ ಕೃತಿ ಅಪಾರ ಜನಪ್ರೀತಿ ಗಳಿಸಿತು. ಮಕ್ಕಳಿಗಾಗಿಯೇ ಇದುವರೆಗೂ ಹನ್ನೆರಡು ಕೃತಿಗಳನ್ನು ರಚಿಸಿದ್ದಾರೆ. ಇತರೆ ಸಾಹಿತ್ಯ ಕೃತಿಗಳೂ ಸೇರಿದಂತೆ ಇದುವರೆಗೆ ೨೩ ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಶ್ರೀ ಯೋಗಿ ನಾರೇಯಣ ಇಂಡಾಲಜಿ ಕೇಂದ್ರದ ನಿರ್ದೇಶಕರಾಗಿರುವ ಡಾ. ಬಾಬು ಕೃಷ್ಣಮೂರ್ತಿಯವರು 'ಲೇಖನ ಕಾವೇರಿ'ಯ ಸಹಾಯಕ ಸಂಪಾದಕರಾಗಿ ವೃತ್ತಿ ಆರಂಭಿಸಿದರು. ಮಂಗಳದ ಸಂಪಾದಕರಾಗಿ, ಬಾಲಮಂಗಳ, ಗಿಳಿವಿಂಡು, ಕರ್ಮವೀರ ಪತ್ರಿಕೆಗಳ ಸಂಪಾದಕರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ. ೨೦೧೧ರಲ್ಲಿ ತುಮಕೂರು ವಿಶ್ವವಿದ್ಯಾಲಯ ಇವರ ಸಾಹಿತ್ಯ ಮತ್ತು ಪತ್ರಿಕಾ ಬರವಣಿಗೆಗಾಗಿ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ, ರಾಜ್ಯ ಸರ್ಕಾರದ ಬಹುಮಾನ, ಕರ್ನಾಟಕ ಜ್ಯೋತಿ ಪ್ರಶಸ್ತಿ, ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ, ನವರತ್ನ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ, ತಿರುಮಲೆ ತಾತಾಚಾರ್ಯ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಉತ್ತರ ಪ್ರದೇಶ ಸರ್ಕಾರದ 'ಸೌಹಾರ್ದ್ ಸಮ್ಮಾನ್' ಪ್ರಶಸ್ತಿ ಇತ್ಯಾದಿ ಗೌರವಗಳು ಡಾ. ಬಾಬು ಕೃಷ್ಣಮೂರ್ತಿಯವರಿಗೆ ಸಂದಿವೆ.

## ಡಾ. ಬಾಬು ಕೃಷ್ಣಮೂರ್ತಿ ಅವರ ಕೃತಿಗಳು

ಅಜೇಯ

ಸಿಡಿಮದ್ದು ನೆತ್ತರು ನೇಣುಗಂಬ

ಅವಮಾನ

ರುಧಿರಾಭಿಷೇಕ

ಡಾ. ಸಿ.ಜಿ. ಶಾಸ್ತ್ರಿ ಒಂದು ಯಶೋಗಾಥೆ

೧೮೫೭-ಭಾರತದ ಸ್ವಾತಂತ್ರ್ಯ ಸಂಗ್ರಾಮ

ಕ್ರೈಮ್ ಫೈಲ್

ಯಾವುದು ಚರಿತ್ರೆ?

ಯುಗದ್ರಷ್ಟ ಭಗತ್‌ಸಿಂಗ್

ಕ್ರಾಂತಿಪರ್ವ

ಮಹಾಸಾಧಕ

ಸ್ವಾತಂತ್ರ್ಯ ಹೋರಾಟದ ಹೀರೋಗಳು.

**ಡಾ. ಬಾಬು ಕೃಷ್ಣಮೂರ್ತಿ**

ನಂ.೨೬/೨೧, ಅನುಗ್ರಹ, ೮ನೇ ಮುಖ್ಯರಸ್ತೆ, ೧೮ನೇ ಕ್ರಾಸ್, ಎನ್.ಎಸ್. ಪಾಳ್ಯ,
ಬಿ.ಟಿ.ಎಂ. ೨ನೇ ಹಂತ, ಬೆಂಗಳೂರು-೫೬೦ ೦೭೬.
ದೂ : ೯೨೪೨೧೯೦೪೨೧



**ಕನ್ನಡ ಸಾರಸ್ವತ ಲೋಕದ ಹಿರಿಯ ಲೇಖಕಿ ಶ್ರೀಮತಿ ಉಷಾ ಪಿ. ರೈ ಅವರ ನಿರಂತರ ಸಾಹಿತ್ಯ ಸಾಧನೆಯನ್ನು ಪುರಸ್ಕರಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ೨೦೧೯ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಲು ಹರ್ಷಿಸುತ್ತದೆ.**

## ಶ್ರೀಮತಿ ಉಷಾ ಪಿ. ರೈ

ಕನ್ನಡದ ಹಿರಿಯ ಕಾದಂಬರಿಕಾರರು, ಕಥೆಗಾರರು, ಕವಯಿತ್ರಿಯೂ ಆಗಿ ಖ್ಯಾತರಾಗಿರುವ ಶ್ರೀಮತಿ ಉಷಾ ಪಿ. ರೈ ಅವರು ೨೩ ಮೇ ೧೯೪೫ರಲ್ಲಿ ಉಡುಪಿಯಲ್ಲಿ ಜನಿಸಿದರು. ಶ್ರೀಯುತ ಕೆ.ಹೊನ್ನಯ್ಯಶೆಟ್ಟಿ – ಶ್ರೀಮತಿ ಕೆದಂಬಾಡಿ ಪದ್ಮಾವತಿ ಶೆಟ್ಟಿ ಇವರ ತಂದೆ–ತಾಯಿ. ಉಷಾ ಅವರ ತಂದೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಗಾಂಧಿವಾದಿಯು ಆಗಿದ್ದರು. ಸಾಹಿತ್ಯ–ಪತ್ರಿಕೋದ್ಯಮದಲ್ಲಿಯೂ ಪರಿಶ್ರಮವಿದ್ದವರು. ತಾಯಿಗೂ ಸಾಹಿತ್ಯಾಸಕ್ತಿಯ ಜೊತೆ ಕುಶಲಕಲೆಗಳಲ್ಲಿ ಆಸಕ್ತಿ. ಹೀಗಾಗಿ ಉಷಾ ಪಿ. ರೈ ಅವರಿಗೆ ಬರವಣಿಗೆ ರಕ್ತಗತವಾಗಿ ಬಂದ ಗುಣ. ಬರವಣಿಗೆ, ಓದು, ಚಿತ್ರಕಲೆ, ಸಮಾಜಸೇವೆ, ಪ್ರವಾಸ – ಇವು ಉಷಾ ಅವರ ನೆಚ್ಚಿನ ಹವ್ಯಾಸಗಳು. ವಿಜಯ ಬ್ಯಾಂಕಿನ ಅಧಿಕಾರಿಯಾಗಿ ಎರಡೂವರೆ ದಶಕದ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಪಡೆದರು. ಪ್ರಜಾಮತ, ಸುಧಾ ಮುಂತಾದ ಜನಪ್ರಿಯ ಪತ್ರಿಕೆಗಳಲ್ಲಿ ಇವರ ಕಾದಂಬರಿಗಳು ಧಾರಾವಾಹಿಯಾಗಿ ಪ್ರಕಟಗೊಂಡು ಓದುಗರ ಮನಗೆದ್ದಿವೆ. ಇವರ ಬಹುತೇಕ ಕೃತಿಗಳು ಹಲವು ಪುನರ್‌ಮುದ್ರಣಗೊಂಡಿರುವುದು ಇವರ ಜನಪ್ರಿಯತೆಗೆ ಸಾಕ್ಷಿ. ಕನ್ನಡದ ಬಹುತೇಕ ಪತ್ರಿಕೆಗಳಲ್ಲಿ ಇವರ ಕಾದಂಬರಿ, ಕಥೆ, ಕವನ, ಹನಿಗವನ, ವ್ಯಕ್ತಿ ಚಿತ್ರಣ, ಚಿಂತನ, ಪ್ರಬಂಧ, ಲಘುಬರಹ ಮತ್ತು ವೈಚಾರಿಕ ಬರಹಗಳು ಪ್ರಕಟಗೊಂಡಿವೆ. ಅನೇಕ ತುಳು ಪತ್ರಿಕೆಗಳಲ್ಲಿ ಇವರ ತುಳು ರಚನೆಗಳು ಬೆಳಕು ಕಂಡಿವೆ. ಹಿಂದಿ, ತೆಲುಗು ಭಾಷೆಗಳಿಗೆ ಅನೇಕ ಕೃತಿಗಳು ಅನುವಾದಗೊಂಡಿವೆ.

‘ಯಾವ ನಾಳೆಯು ನಮ್ಮದಲ್ಲ’ ಎಂಬ ಇವರ ಆತ್ಮಕಥೆ ಅಪಾರ ಜನಮನ್ನಣೆ ಗಳಿಸಿದೆ. ತಮ್ಮ ಅರವತ್ತನೇ ವಯಸ್ಸಿನಲ್ಲಾದ ಮಾರಣಾಂತಿಕ ಅಪಘಾತದ ನೋವನ್ನು ಮರೆಯಲು ಕುಂಚ ಹಿಡಿದು ಚಿತ್ರಕಲೆ ಕಲಿತರು. ಈಗ ಆಯಿಲ್ ಪೈಂಟಿಂಗ್, ಅಕ್ರೆಲಿಕ್, ಫ್ಯಾಬ್ರಿಕ್, ಗ್ಲಾಸ್ ಪೈಂಟಿಂಗ್ ಮುಂತಾದುವಲ್ಲಿ ಕುಶಲತೆ ಪಡೆದ ಚಿತ್ರಕಲಾವಿದೆಯಾಗಿಯೂ ಗುರುತಿಸಲ್ಪಟ್ಟಿದ್ದಾರೆ. ಲೇಖಕಿಯರ ಸಂಘದ ಅಧ್ಯಕ್ಷರಾಗಿದ್ದ ಇವರು ಅನೇಕ ಸಂಘ ಸಂಸ್ಥೆಗಳ ಕ್ರಿಯಾಶೀಲ ಸದಸ್ಯರಾಗಿದ್ದಾರೆ. ಇವರ ಸಾಹಿತ್ಯ-ಸಮಾಜ ಸೇವೆಗಾಗಿ ಸಂದ ಪ್ರಶಸ್ತಿ ಪುರಸ್ಕಾರಗಳು ಹಲವು. ಇಳಿಪ್ರಾಯದಲ್ಲೂ ಲೇಖನಿಯ ಹರಿತ ಕಂತಿಲ್ಲ. ಸದಾ ನಗೆ ಮೊಗದಿಂದ ವಿವಿಧ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿರುವ ಅಪರೂಪದ ಆತ್ಮಸ್ಥೈರ್ಯದ ಹಿರಿಯಜೀವ ಉಷಾ ಪಿ. ರೈ ಅವರು.

## ಉಷಾ ಪಿ. ರೈ ಅವರ ಕೃತಿಗಳು

### ಕಾದಂಬರಿಗಳು

ಅನುಬಂಧ, ಪರಿಭ್ರಮಣ, ಉತ್ತರಣ,
ಸುಪ್ರಸ್ವರ, ನಿಶಾನೆ, ಜಾಗೃತಿ, ನಿಯತಿ

### ಕವಿತೆ

ಕನಸುಗಳು ನನಸುಗಳು
ಹಕ್ಕಿ ಮತ್ತು ಗಿಡುಗ, ಭಾವಹನಿ
ಊರುಗೋಲು (ತುಳು)
ಮಲ್ಲಿಗೆದ ಮುಗುರು(ತುಳು)

### ಕಥೆ

ಬದುಕೆಂಬ ಚದುರಂಗದಾಟದ ದಾಳಗಳು
ಒಂದೇ ದೋಣಿಯ ಪ್ರಯಾಣಿಕರು
ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ

### ಜೀವನ ಚರಿತ್ರೆ

ಎಂ.ಕೆ. ಇಂದಿರಾ, ಮಲ್ಲಿಕಾ ಕಡಿದಾಳ್ ಮಂಜಪ್ಪ
ದೇವಕಿ ಎಂ. ಶೆಟ್ಟಿ

### ಪ್ರಬಂಧ

ಆಂತರ್ಯ, ಮಧ್ಯಂತರ, ಆಡಿಸಿ ನೋಡು ಬೀಳಿಸಿ ನೋಡು
ಕೆಲವೊಂದು ಧ್ವನಿಗಳು

### ಇತರೆ


ಲಕ್ಷದ್ವೀಪಕ್ಕೆ ಲಗ್ಗೆ ಇಟ್ಟಾಗ (ಪ್ರವಾಸ ಕಥನ)
ಯಾವ ನಾಳೆಯೂ ನಮ್ಮದಲ್ಲ (ಆತ್ಮಕಥೆ)

### ಸಂಪಾದಿತ

ತುಳು ಕವಿತೆಲು ಬೊಕ್ಕೊ ಗಾದೆಲು
ನವಯುಗದ ಪ್ರವರ್ತಕ ಕೆ.ಹೊನ್ನಯ್ಯ ಶೆಟ್ಟಿ
ಲೇಖಕಿಯರ ಸಣ್ಣ ಕಥೆಗಳು
ಲೇಖಲೋಕ ೩-೪
ಎಪ್ಪತ್ತರ ವಯಸ್ಸು ಇಪ್ಪತ್ತರ ಮನಸ್ಸು

**ಶ್ರೀಮತಿ ಉಷಾ ಪಿ. ರೈ**

ಬಿ-೪೨, ಬೈಸಾನಿ ಸ್ಕೈವೇ ಮೌಂಟೆನ್ ಸ್ಟ್ರೀಟ್, ೧ನೇ ಬ್ಲಾಕ್,
ಜಯನಗರ ಈಸ್ಟ್, ಬೆಂಗಳೂರು-೫೬೦೦೧೧.
ದೂ : ೯೯೧೬೩೮೪೨೬೫



**ಕನ್ನಡದ ವಿದ್ವತ್ಪರಂಪರೆಯ ಸಮರ್ಥ ವಿದ್ವಾಂಸರಲ್ಲೊಬ್ಬರಾಗಿರುವ ಡಾ. ವೀರಣ್ಣ ರಾಜೂರ ಅವರ ಅನನ್ಯ ಕಾಣ್ಕೆಯನ್ನು ಸ್ಮರಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ೨೦೧೯ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಲು ಹರ್ಷಿಸುತ್ತದೆ.**

## ಡಾ. ವೀರಣ್ಣ ರಾಜೂರ

ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮ ಅಪೂರ್ವ ವಿದ್ವತ್ತಿನಿಂದ ಸುಪ್ರಸಿದ್ಧರಾಗಿರುವ ಡಾ. ವೀರಣ್ಣ ರಾಜೂರ ಅವರು ೪ ಜೂನ್ ೧೯೪೬ ರಲ್ಲಿ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಬೆನಕನಾಳದಲ್ಲಿ ಜನಿಸಿದರು. ಬೆನಕನಾಳ, ಹನುಮಸಾಗರ, ಗದಗ, ಧಾರವಾಡಗಳಲ್ಲಿ ಇವರ ವಿದ್ಯಾಭ್ಯಾಸ ಸಾಗಿತು. 'ಕನ್ನಡ ಸಾಂಗತ್ಯ ಸಾಹಿತ್ಯ' ಎಂಬ ಮಹಾಪ್ರಬಂಧಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಇವರಿಗೆ ಡಾಕ್ಟರೇಟ್ ಪದವಿ ನೀಡಿದೆ. ಸಹಾಯಕ ಸಂಶೋಧಕ, ಅಧ್ಯಾಪಕ, ಪ್ರವಾಚಕ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಇದೀಗ ಧಾರವಾಡದಲ್ಲಿ ನಿವೃತ್ತಿ ಜೀವನ ಸಾಗಿಸುತ್ತಿದ್ದಾರೆ.

ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಗ್ರಂಥಸಂಪಾದನೆ, ವಚನ ಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಸಂಶೋಧನೆ, ರಂಗಭೂಮಿ, ವ್ಯಾಕರಣಶಾಸ್ತ್ರ ಮುಂತಾದವು ಇವರ ಆಸಕ್ತಿಯ ಕ್ಷೇತ್ರಗಳು. ಸೃಜನ -ಸೃಜನೇತರ ಪ್ರಕಾರಗಳಲ್ಲಿ ನಾಟಕ, ಕಥೆ, ಜೀವನ ಚರಿತ್ರೆ ಮುಂತಾದ ವಿವಿಧ ಪ್ರಕಾರಗಳಲ್ಲಿ ಇದುವರೆಗೆ ೧೨೨ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ೩೪ ವರ್ಷಗಳ ಬೋಧನಾನುಭವದ ಜೊತೆಗೆ ೧೬ ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ, ೧೪ ಎಂ.ಫಿಲ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ, ಸಂ.ಶಿ. ಭೂಸನೂರಮಠ ಪ್ರತಿಷ್ಠಾನ, ಭೂಮಿಕಾ ಸಾಹಿತ್ಯ ಸಂಘಟನೆ ಅಮೆರಿಕಾ, ಹಡಪದ ಅಪ್ಪಣ್ಣ ಪೀಠ ಮುಂತಾದ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದಾರೆ.

ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಫೆಲೋಶಿಪ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಎರಡು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಪ್ರಶಸ್ತಿ, ಹಳಕಟ್ಟಿ ಶ್ರೀ ಪ್ರಶಸ್ತಿ, ಡಾ. ಜಚನಿ ಪ್ರಶಸ್ತಿ, ಚಿದಾನಂದ ಪ್ರಶಸ್ತಿ, ಅಖಿಲ ಕರ್ನಾಟಕ ಹಸ್ತಪ್ರತಿ ಸಮ್ಮೇಳನದ ಸರ್ವಾಧ್ಯಕ್ಷ ಗೌರವಗಳು ಸೇರಿದಂತೆ ಇವರಿಗೆ ಸಂದಿರುವ ಪುರಸ್ಕಾರಗಳ ಪಟ್ಟಿಯು ಹಿರಿದಾಗಿದೆ. ವಿದೇಶದಲ್ಲೂ ಕನ್ನಡದ ದನಿ ಮೊಳಗಿಸಿರುವ ಡಾ. ವೀರಣ್ಣ ರಾಜೂರ ಕನ್ನಡ ಸಾರಸ್ವತ ಲೋಕದ ಹೆಮ್ಮೆ.

## ಡಾ. ವೀರಣ್ಣ ರಾಜೂರ ಅವರ ಕೃತಿಗಳು

### ಸಂಶೋಧನೆ

ಕನ್ನಡ ಸಾಂಗತ್ಯ ಸಾಹಿತ್ಯ, ವಚನ ಅಧ್ಯಯನ
ವಚನ ಸಂಶೋಧನ, ವಿಚಾರ ಪತ್ನಿಯರು
ಬಸವೋತ್ತರ ಯುಗದ ವಚನ ಸಾಹಿತ್ಯ
ನೂರು ಶೋಧ, ನೂರೊಂದು ಬರಹ,
ಶೀಲ ಸಂಪಾದನೆ

### ನಾಟಕ

ಕರ್ನಾಟಕ ಕೇಸರಿ, ಬೆಳಗ ನುಂಗಿದ ಕತ್ತಲೆ
ರತ್ನಾಜಿ, ಕೆಳದಿ ಚೆನ್ನಮಾಜಿ
ಅವಳೇ ಗಂಡ ನಾನೇ ಹೆಣ್ತಿ
ಲವ್ ಅಂದ್ರೆ ಪ್ರೇಮ, ಹೊಟ್ಟೆಯ ಮಗಳು
ಕೊರಡು ಕೊನರುವುದೆ? ಇತ್ಯಾದಿ

### ಅಭಿನಂದನೆ, ಸಂಸ್ಮರಣೆ

ಮಹಾಮಾರ್ಗ, ಸಂಸ್ಕೃತಿ, ಯುಗದ ಉತ್ಸಾಹ,
ಮಹಾಂತ ಬೆಳಗು, ಕದಳಿಯ ಕಲ್ಪತರು, ಇತ್ಯಾದಿ

### ಜೀವನ ಚರಿತ್ರೆ

ಪಿ.ಬಿ.ಧುತ್ತರಗಿ
ಹಾಲಭಾವಿ ವೀರಭದ್ರಪ್ಪನವರು

### ಸಂಪಾದನೆ

ವೀರಶೈವ ತಾರಾವಳಿ ಸಂಪುಟ,
ಷಟ್‌ಸ್ಥಲ ಜ್ಞಾನಸಾರಾಮೃತ ಟೀಕೆಗಳು
ಎಲ್ಲ ಪುರಾತನರ ವಚನಗಳು, ಕೈವಲ್ಯ ಸಾಹಿತ್ಯ ಸಂಪುಟ
ಶತಕ ಸಂಪುಟ, ಸಾಂಗತ್ಯ ಸಂಪುಟ, ಬೇತಾಳ ಪಂಚವಿಂಶತಿ
ಭವ್ಯಜನ ಚಿಂತಾಮಣಿ


**ಡಾ. ವೀರಣ್ಣ ರಾಜೂರ**

ನಂ.೭, 'ಅರಿವು', ಡಾ. ವಿ.ಕೃ. ಗೋಕಾಕ ರಸ್ತೆ,
ಬಾರಾಕೊಟ್ರಿ, ಧಾರವಾಡ-೫೮೦೦೦೭.
ದೂ : ೯೯೦೦೩೩೪೭೩೧



ಇತಿಹಾಸಜ್ಞ, ಸಂಶೋಧಕರಾದ ಪ್ರೊ. ಲಕ್ಷ್ಮಣ ತೆಲಗಾವಿ ಅವರು ಕನ್ನಡ ಸಾಹಿತ್ಯಲೋಕಕ್ಕೆ ನೀಡಿರುವ ಅನನ್ಯ ಕಾಣ್ಕೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ೨೦೧೯ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಸನ್ಮಾನಿಸಲು ಹರ್ಷಿಸುತ್ತದೆ.

## ಪ್ರೊ. ಲಕ್ಷ್ಮಣ ತೆಲಗಾವಿ

ನಾಡಿನ ಸುಪ್ರಸಿದ್ಧ ಸಂಶೋಧಕರೂ ಇತಿಹಾಸಜ್ಞರೂ ಎಂದು ಖ್ಯಾತರಾಗಿರುವ ಪ್ರೊ. ಲಕ್ಷ್ಮಣ ತೆಲಗಾವಿಯವರು ೧೯೪೨ರ ಜನವರಿ ೧ ರಂದು ಚಿತ್ರದುರ್ಗದಲ್ಲಿ ಜನಿಸಿದರು. ಶ್ರೀಯುತ ಡಿ.ಪರಸಪ್ಪ ತೆಲಗಾವಿ ಮತ್ತು ಶ್ರೀಮತಿ ಚಂದ್ರಮ್ಮ ದಂಪತಿ ಇವರ ತಂದೆ-ತಾಯಿ. ಬಿ.ಎ. ಪದವಿವರೆಗಿನ ವ್ಯಾಸಂಗವನ್ನು ಚಿತ್ರದುರ್ಗದಲ್ಲಿಯೇ ಪೂರೈಸಿದ ಪ್ರೊ. ಲಕ್ಷ್ಮಣ ತೆಲಗಾವಿಯವರು ಮುಂದೆ ಮೈಸೂರು ವಿ.ವಿ.ಯಿಂದ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಗಳಿಸಿ ಅದೇ ವಿ.ವಿ. ಯಿಂದ "ಚಿತ್ರದುರ್ಗದ ನಾಯಕ ಅರಸರು" ಎಂಬ ಪ್ರೌಢಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದು ಮಹಾರಾಜ ಕಾಲೇಜಿನಲ್ಲಿ ಚರಿತ್ರೆಯ ಅಧ್ಯಾಪಕರಾಗಿ ವೃತ್ತಿಜೀವನವನ್ನು ಆರಂಭಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ, ಶಾಸನ ತರಗತಿಗಳ ಅಧ್ಯಾಪಕ, ಕರ್ನಾಟಕ ಗೆಜೆಟಿಯರ್ ಸಂಪಾದಕ, ಹಂಪಿ ಕನ್ನಡ ವಿ.ವಿ. ಯ ಚರಿತ್ರೆ ವಿಭಾಗದ ರೀಡರ್ ಮತ್ತು ಮುಖ್ಯಸ್ಥ, ಸಮಾಜ ವಿಜ್ಞಾನಗಳ ನಿಕಾಯದ ಡೀನ್, ಸಂದರ್ಶಕ ಪ್ರಾಧ್ಯಾಪಕ, ಯುಜಿಸಿಯ ಎಮೆರಿಟಸ್ ಫೆಲೋ ಮುಂತಾದ ಹುದ್ದೆಗಳನ್ನು ನಿರ್ವಹಿಸಿದ ಹಿರಿಮೆ ಇವರದು.

ಸುದೀರ್ಘ ವೃತ್ತಿ ಜೀವನದ ನಡುವೆ ೨೮ ಕೃತಿಗಳನ್ನು ಪ್ರಕಟಿಸಿರುವ ಪ್ರೊ. ಲಕ್ಷ್ಮಣ ತೆಲಗಾವಿಯವರು ಚಿತ್ರದುರ್ಗ ದರ್ಶಿನಿ, ಚಿತ್ರದುರ್ಗ ಹ್ಯಾನ್ ಇನ್‌ಸೈಟ್, ಬುರುಗು, ಕರ್ನಾಟಕ ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ಮೌರ್ಯ ಮತ್ತು ಶಾತವಾಹನಯುಗ, ವಿಜಯನಗರ ಕಾಲದ ರಾಮಾನುಜ ಕೂಟಗಳು, ಎಪ್ಪತ್ತೇಳು ಪಾಳೇಗಾರರು, ಒನಕೆ ಓಬವ್ವ - ಚಾರಿತ್ರಿಕ ವಿವೇಚನೆ, ದೊಡ್ಡೇರಿ ಕದನ ಮುಂತಾದ ಹಲವು ಮಹತ್ವದ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ಇವರು ಸಂಪಾದಿಸಿಕೊಟ್ಟಿರುವ ಕೃತಿಗಳ ಪಟ್ಟಿಯೂ ಹಿರಿದಾಗಿದೆ. ಇವರ ಸಾಹಿತ್ಯ ಸಂಶೋಧನಾ ಕಾರ್ಯಕ್ಕೆ ದೆಹಲಿಯ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ರಾಷ್ಟ್ರೀಯ ಫೆಲೋಶಿಪ್ ಹಾಗೂ ಹರಿಯಾಣದ ಸುಭದ್ರಕುಮಾರಿ ಚೌಹಾಣ್ ಸಮ್ಮಾನಗಳು ದೊರೆತಿವೆ. 'ಶ್ರೀಗುರು ರವಿದಾಸರತ್ನ' ಹಾಗೂ 'ಸಂಶೋಧನಾ ನಿಧಿ' ಪ್ರಶಸ್ತಿಗಳಿಗೂ ಭಾಜನರಾಗಿದ್ದಾರೆ.

## ಪ್ರೊ. ಲಕ್ಷ್ಮಣ ತೆಲಗಾವಿ ಅವರ ಕೃತಿಗಳು

- ಚಿತ್ರದುರ್ಗ ದರ್ಶಿನಿ
- ಬುರುಗು
- ದೊಡ್ಡೇರಿ ಕದನ
- ಚಂದ್ರವಳ್ಳಿ
- ಚಿತ್ರದುರ್ಗದ ನಾಯಕ ಅರಸರು
- ಎಪ್ಪತ್ತೇಳು ಪಾಳೇಗಾರರು
- ಒನಕೆ ಓಬವ್ವ- ಚಾರಿತ್ರಿಕ ವಿವೇಚನೆ
- ಐತಿಹಾಸಿಕ ಚಿತ್ರದುರ್ಗ
- ಮಿರ್ಜಿ ಅಣ್ಣಾರಾಯ
- ಹುಲ್ಲೂರು ಶ್ರೀನಿವಾಸ ಜೋಯಿಸರ - ಐತಿಹಾಸಿಕ ದಾಖಲೆಗಳು

**ಪ್ರೊ. ಲಕ್ಷ್ಮಣ ತೆಲಗಾವಿ**

ನಂ.೧೫, ಸೋಮಶೇಖರ ನಿಲಯ, ಯಲ್ಲಮ್ಮದೇವಿ ಹೌಸಿಂಗ್ ಸೊಸೈಟಿ
ರಜತಗಿರಿ, ಧಾರವಾಡ-೫೮೦೦೦೮.
ದೂ : ೯೪೪೯೧೦೭೭೫೩

# ಕರ್ನಾಟಕ ಸಾಹಿತ್ಯ ಅಕಾಡೆಮಿ

ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು

## ಸದಸ್ಯರು

ಡಾ. ಜಿನದತ್ತ ಹಡಗಲಿ
ಶ್ರೀಮತಿ ಛಾಯಾ ಭಗವತಿ
ಡಾ. ರೋಹಿಣಾಕ್ಷ ಶಿರ್ಲಾಲು
ಶ್ರೀ ಸಂತೋಷ್ ತಮ್ಮಯ್ಯ
ಡಾ. ಬಿ.ಎಂ. ಶರಭೇಂದ್ರ ಸ್ವಾಮಿ
ಶ್ರೀಮತಿ ಪಾರ್ವತಿ ಪಿಟಗಿ
ಡಾ. ವೈ.ಸಿ. ಭಾನುಮತಿ
ಶ್ರೀ ದತ್ತಗುರು ಸೀತಾರಾಮ ಹೆಗಡೆ

ಶ್ರೀ ಮಡಿವಾಳಪ್ಪ ಮುಚಳಂಬಿ
ಶ್ರೀಮತಿ ದೀಪ್ತಿ ಭದ್ರಾವತಿ
ಶ್ರೀ ಮಾರುತಿ ಚಂದಪ್ಪ ಕಟ್ಟೀಮನಿ
ಶ್ರೀ ಕೆ. ನಲ್ಲತಂಬಿ
ಡಾ. ಮಾರ್ಷಲ್ ಶರಾಂ
ಡಾ. ಹೆಚ್. ಓಂಕಾರ ನಾಯ್ಕ್
ಡಾ. ಡಿ.ಸಿ. ರಾಮಚಂದ್ರ

ಶ್ರೀ ಜಿ. ಕಲ್ಲೇಶಪ್ಪ
ಅರ್ಥ ಸದಸ್ಯರು

ಶ್ರೀ ಕರಿಯಪ್ಪ ಎನ್.
ರಿಜಿಸ್ಟ್ರಾರ್